SRVK /SSVK
SHIVANAHALLI

ತರಗತಿ : 3 ನೇತರಗತಿ ವಿದ್ಯಾರ್ಥಿಯ ಹೆಸರು :________________.

ವಿಷಯ :ಕನ್ನಡ

Topic :17

# ತುತ್ತೂರಿ (ಪದ್ಯ )

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮಪದನಿಸ ಊದಿದನು
ಸನಿದಪ ಮಗರಿಸ ಊದಿದನು

ತನಗೇ ತುತ್ತೂರಿ ಇದೆಯೆಂದ
ಬೇರಾರಿಗು ಅದು ಇಲ್ಲೆಂದ
ಕಸ್ತೂರಿ ನಡೆದನು ಬೀದಿಯಲಿ
ಜಂಭದ ಕೋಳಿಯ ರೀತಿಯಲಿ

ತುತ್ತೂರಿಯೂದುತ ಕೊಳದ ಬಳಿ
ನಡೆದನು ಕಸ್ತೂರಿ ಸಂಜೆಯಲಿ
ಜಾರಿತು ನೀರಿಗೆ ತುತ್ತೂರಿ
ಗಂಟಲು ಕಟ್ಟಿತು ನೀರೂರಿ

ಸರಿಗಮ ಊದಲು ನೋಡಿದನು
ಗಗಗಗ ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತೂರಿ ಬೋಳಾಯ್ತು

ಬಣ್ಣದ ತುತ್ತೂರಿ ಹಾಳಾಯ್ತು
ಜಂಭದ ಕೋಳಿಗೆ ಗೋಳಾಯ್ತು.

------ ಜಿ.ಪಿ ರಾಜರತ್ನಂ .

## ಅ) ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ.

೧) ಕಸ್ತೂರಿ ಏನನ್ನು ಕೊಂಡನು?

೨) ಕಸ್ತೂರಿ ಯಾವುದರ ಬಳಿ ತುತ್ತೂರಿ ಊದಿದನು?

೩) ಜಂಭದ ಕೋಳಿ ಯಾರು ?

೪) ಬಣ್ಣವು ಯಾವುದರ ಪಾಲಾಯಿತು

೫) ನೀನು ಆಟ ಆಡಲು ಯಾವ ಯಾವ ವಸ್ತುಗಳು ಬೇಕು?

೬) ನೀನು ಮನೆಯಲ್ಲಿ ಯಾವ ಯಾವ ಆಟಗಳನ್ನು ಆಡುವೆ ?